**ಓ.ಎಸ್. ಸಂಖ್ಯೆಃ 219 /2022**

**ಪಿ.ಡಬ್ಲ್ಯೂಃ 1**

ದಿನಾಂಕಃ 06.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರಿಂದ**

3. ವಾದಿ ನನಗೆ ತಮ್ಮನಾಗಬೇಕು. ಈ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತ ಇದೆ. ದಾವಾ ಆಸ್ತಿಯನ್ನು ನಾವು ನೊಂದಾವಣಿ ಮಾಡಿಸಿಕೊಂಡಿದ್ದೇವು ಆ ಉದ್ದೇಶಕ್ಕಾಗಿ ಈ ದಾವೆಯನ್ನು ಸಲ್ಲಿಸಲಾಗಿದೆ. ಈ ದಾವೆಯನ್ನು 9 ಜನರ ವಿರುದ್ಧ ಸಲ್ಲಿಸಲಾಗಿದೆ. ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿಗಳು ಈಗ ಸಣ್ಣ ನಾಗನಾಯಕ ರವರ ಹೆಸರಿನಲ್ಲಿ ಇರುತ್ತವೆ. ಸಣ್ಣ ನಾಗನಾಯಕ ರವರು ಪ್ರತಿವಾದಿಯವರಿಗೆ ತಂದೆ ಮತ್ತು ಅಜ್ಜ ಆಗಬೇಕು. ದಾವಾ ಆಸ್ತಿಯ ಸರ್ವೆ ನಂಬರ್ 114/ಎ 3 ಎಕರೆ 23 ಸೆಂಟ್ಸ್ ಇರುತ್ತದೆ. ಅದು ದಾಸಾಪುರ ಗ್ರಾಮದಲ್ಲಿ ಇರುತ್ತದೆಂ. ಈ ದಾವಾ ಆಸ್ತಿಯ ಚೆಕ್ಕು ಬಂದಿ ಹೇಳಲು ಬರುತ್ತದೆ. ದಕ್ಷಿಣಕ್ಕೆಃ ಬಸಯ್ಯಸ್ವಾಮಿ ರವರ ಜಮೀನು ಇರುತ್ತದೆ. ಪಶ್ಚಿಮಕ್ಕೆಃ ಅಮರಗೌರವರ ಜಮೀನು ಇದೆ. ಪೂರ್ವಕ್ಕೆಃ ಬಸಯ್ಯಸ್ವಾಮಿ ರವರ ಜಮೀನು ಇರುತ್ತದೆ. ಉತ್ತರಕ್ಕೆಃ ಈಶ್ವರಪ್ಪ ರವರ ಜಮೀನು ಇರುತ್ತದೆ. ವಾದ ಪತ್ರದಲ್ಲಿ ಈ ಮೇಲಿನ ಚೆಕ್ಕು ಬಂದಿ ಹೇಳಿಲ್ಲ ಎಂದರೆ ಸರಿಯಲ್ಲ.

4. ಕೊಳ್ಳಿ ಈರಣ್ಣರವರಿಗೆ ದಾವಾ ಆಸ್ತಿಯು ಅವರ ತಾಯಿಂದ ಬಂದಿರುತ್ತದೆ. ನಾನು 6 ನೇ ತರಗತಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಅಷ್ಟಾಗಿ ಬರುವುದಿಲ್ಲ. ದಾವಾ ಆಸ್ತಿಯನ್ನು ಹೊರತು ಪಡಿಸಿ ಕೊಳ್ಳಿ ಈರಣ್ಣರವರಿಂದ ಬೇರೆ ಆಸ್ತಿಯನ್ನು ನಾವು ಖರೀದಿ ಮಾಡಿರುವುದಿಲ್ಲ. ದಾವಾ ಆಸ್ತಿ ಖರೀದಿ ಮಾಡುವ ಸಮಯದಲ್ಲಿ ಪಹಣಿ ಪತ್ರಿಕೆಗಳು ಯಾರ ಹೆಸರಿನಲ್ಲಿ ಇದ್ದವು ಎಂಬುದು ನನಗೆ ಗೊತ್ತಿಲ್ಲ. ಆ ಕಾಲದಲ್ಲಿ ಪಹಣಿ ಪತ್ರಿಕೆಗಳು ಸಣ್ಣ ನಾಗನಾಯಕರವರ ಹೆಸರಿನಲ್ಲಿದ್ದವು ಎಂದರೆ ಸಾಕ್ಷಿಯು ತಾನು ನೋಡಿಲ್ಲ ಎಂದು ನುಡಿಯುತ್ತಾರೆ.

5. 1970 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಗಳು ಸಣ್ಣ ನಾಗನಾಯಕನ ಹೆಸರಿನಲ್ಲಿದ್ದವು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಖರೀದಿ ಮಾಡಿದ ನಂತರ ಅದರ ಹಕ್ಕು ಬದಲಾವಣೆಯನ್ನು ಮಾಡಿಸಿಕೊಂಡಿರಲಿಲ್ಲ. ಸಾಮಾನ್ಯವಾಗಿ ಆಸ್ತಿಯು ಒಬ್ಬರ ಹೆಸರಿನಲ್ಲಿದ್ದರೆ ಮಾತ್ರ ಕ್ರಯ ಪತ್ರ ನೊಂದಣಿಯಾಗುತ್ತದೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ವಾದಿಯ ಹೆಸರಿಗೆ ಕ್ರಯ

ಪತ್ರ ಆಗುವ ಸಮಯದಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆ ಕೊಳ್ಳಿ ಈರಣ್ಣರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಪಹಣಿ ಪತ್ರಿಕೆಗಳನ್ನು ನೋಡಿರಲಿಲ್ಲ. ಸಣ್ಣ ನಾಗನಾಯಕ ರವರ ಮೈನರ್ ಗಾರ್ಡಿಯನ್ ಆಗಿ ಕೊಳ್ಳಿ ಈರಣ್ಣರವರು ಇದ್ದರು ಅದರ ಆಧಾರದ ಮೇಲೆ ನಾವು ಅವರಿಂದ ಕ್ರಯ ಪತ್ರವನ್ನು ಮಾಡಿಸಿಕೊಂಡೆವು. ನಿಪಿ:3 ರ ದಾಖಲೆಯು ಕಾನೂನು ವಿರುದ್ಧವಾದ ಕ್ರಯ ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯು ತನ್ನ ರಾಜಕೀಯ ಪ್ರಭಾವ ಬಳಸಿ ಕ್ರಯ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

6. ಕೊಳ್ಳಿ ಈರಣ್ಣ ವಿರುದ್ಧ ನಾವು ಪೊಲೀಸ್ ದೂರನ್ನು ದಾಖಲು ಮಾಡಲಿಲ್ಲ. ಕೊಳ್ಳಿ ಈರಣ್ಣನನ್ನು ಈ ದಾವೆಯಲ್ಲಿ ಪಕ್ಷಗಾರನಾಗಿ ಮಾಡಿಲ್ಲ, ಆತನ ವಿರುದ್ಧ ಪ್ರತ್ಯೇಕ ದಾವೆಯನ್ನು ಸಲ್ಲಿಸಿಲ್ಲ. ನಿಪಿ:3 ಕ್ರಯ ಪತ್ರ ಆದ ನಂತರ ಹಕ್ಕು ಬದಲಾವಣೆಗಾಗಿ ವಾದಿ ಅರ್ಜಿಯನ್ನು ಸಲ್ಲಿಸಿದ್ದರು. ಆದರೆ ಹಕ್ಕು ಬದಲಾವಣೆ ಆಗಿರುವುದಿಲ್ಲ. ಸದರಿ ಅರ್ಜಿಯ ನಕಲನ್ನು ಹಾಜರು ಪಡಿಸಿಲ್ಲ. ಸದರಿ ಅರ್ಜಿಯ ಮೇಲೆ ತಹಶೀಲ್ದಾರ್ ರವರು ಮಾಡಿದ ಆದೇಶ ಏನು ಎಂದು ಹೇಳಲು ಆಗುವುದಿಲ್ಲ.

7. ದಿ:20-09-2021 ರಂದು ದಾವಾ ಆಸ್ತಿಯ ಮುಟೇಷನ್ ಅನ್ನು ವಾದಿಯ ಹೆಸರಿಗೆ ಮಾಡಲು ತಹಶೀಲ್ದಾರ್ ಕಛೇರಿಗೆ ಅರ್ಜಿಯನ್ನು ಸಲ್ಲಿಸಿದ್ದೇವು. ಸದರಿ ಅರ್ಜಿ ನಿಪಿ:33 ರಲ್ಲಿನ ಆದೇಶದಂತೆ ತಿರಸ್ಕೃತಗೊಂಡಿರುತ್ತದೆ ಎಂದರೆ ಸರಿ. ಸದರಿ ಆದೇಶದಲ್ಲಿ ತಹಶೀಲ್ದಾರ್ ರವರು ಗಮನಿಸಿದ ಅಂಶವನ್ನು ವಾದಿಯು ನನಗೆ ಹೇಳಿದ್ದಾರೆ.

8. ಪ್ರತಿವಾದಿಗಳು ದಾವಾ ಆಸ್ತಿಯ ಹಕ್ಕು ಬದಲಾವಣೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು. ಸದರಿ ಅರ್ಜಿಗೆ ಸ್ವತಃ ನಾನೇ ತಕರಾರು ಅರ್ಜಿಯನ್ನು ಸಲ್ಲಿಸಿದ್ದೆ. ಸದರಿ ಅರ್ಜಿಗೆ ನಾನು ತಕರಾರು ಸಲ್ಲಿಸಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ಸಲ್ಲಿಸಿದ್ದ ಅರ್ಜಿಯ ಮೇಲೆ ಯಾವ ಆದೇಶವಾಯಿತು ಎಂದು ನನಗೆ ಗೊತ್ತಿಲ್ಲ. ಕೊಳ್ಳಿ ಈರಣ್ಣರವರಿಂದ ನಾವು ಕಾನೂನು ಭಾಹಿರವಾಗಿ ನಿಪಿ:3 ಪತ್ರವನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1970 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಯ ಸ್ವಾಧೀನವನ್ನು ಪ್ರತಿವಾದಿಯವರು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಮಗೂ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**